**ಓ.ಎಸ್** 137/2021 **ಪಿ.ಡಬ್ಲೂಃ 1**

ಸಾಕ್ಷಿಯನ್ನು ದಿಃ **13.03.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಆರ್.ಕೆ ವಕೀಲರ ಪರವಾಗಿ ಶ್ರೀ ಡಿ.ಜಿ ವಕೀಲ**ರಿಂದ**

ನಾನು ದ್ವಿತೀಯ ವರ್ಷದ ಪದವಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮದುವೆ ಆಗಿ 23 ವರ್ಷಗಳಾಗಿವೆ. ನಾನು ಹುಣಸೂರಿನಲ್ಲಿ ವಾಸವಾಗಿದ್ದೇನೆ. ನಮ್ಮ ತಂದೆಗೆ 3 ಜನ ಗಂಡು ಮಕ್ಕಳು ನಾನೊಬ್ಬಳೆ ಹೆಣ್ಣು ಮಗಳು. ನನ್ನ ಮೂವರು ಸಹೋದರರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿದ್ದೇನೆ ಎಂದರೆ ಸರಿ. ನಾನು ನಮ್ಮ ತವರು ಮನೆಗೆ ಹೋಗಿ ಬಂದು ಮಾಡುತ್ತಿಲ್ಲ ಎಂದರೆ ಮೊದಲು ಹೋಗುತ್ತಿದ್ದೆ 2005 ರ ಈಚೆಯಿಂದ ಹೋಗಿಲ್ಲ. ನಮ್ಮ ತಂದೆ ಮತ್ತು ನನ್ನ ಸಹೋದರರಾದ ಪ್ರತಿವಾದಿ 1 ರಿಂದ 4 ರವರು ಒಂದು ಕುಟುಂಬದಲ್ಲಿ ವಾಸವಾಗಿದ್ದಾರೆ. ಈ ದಾವಾ ಆಸ್ತಿಗಳೆಲ್ಲಾ ನನ್ನ ತಾತನಿಂದ ಬಂದಂತಂಹ ಪಿತ್ರಾರ್ಜಿತ ಆಸ್ತಿಗಳು ಆಗಿವೆ. ದಾವಾ 2 ನೇ ಐಟಂ ಸ್ವತ್ತು ಸರ್ವೆ ನಂ. 140/2 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದೆ ಎಂದೆ ಸರಿಯಲ್ಲ, ಅದೂ ಕೂಡ ನಮ್ಮ ತಾತನ ಜಾಗವಾಗಿದೆ. ದಾವಾ 2 ನೇ ಐಟಂ ಸ್ವತ್ತು ನಮ್ಮ ತಾತನಿಂದ ಬಂದಿದೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿದ್ದೇನೆ.

ದಿಃ 29.04.2010 ರಂದು ದಾವಾ 2 ನೇ ಐಟಂ ಸ್ವತ್ತನ್ನು ಪ್ರತಿವಾದಿ 1 ರಿಂದ 4 ರವರು 5 ನೇ ಪ್ರತವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ 2 ನೇ ಐಟಂ ಸ್ವತ್ತನ್ನು 1 ನೇ ಪ್ರತಿವಾದಿ ಮಾರಾಟ ಮಾಡಿದ್ದು, ಸದರಿ ಕ್ರಯ ಪತ್ರಕ್ಕೆ ಅದರ ಒಕ್ಕಣಿಕೆಯನ್ನು ಒಪ್ಪಿ ಪ್ರತಿವಾದಿ 2 ರಿಂದ 4 ರವರು ಸಹ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ 3 ನೇ ಐಟಂ ಸ್ವತ್ತು ಸರ್ವೆ ನಂ. 139/2 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದೆ ಎಂದರೆ ಹೌದು ಸ್ವಯಾರ್ಜಿತ ಅವರ ಸ್ವಂತದ್ದು ಎಂದು ನುಡಿದು ನಮ್ಮ ತಾತನಿಂದ ಬಂದ ಸ್ವತ್ತಾಗಿದೆ ಎನ್ನುತ್ತಾರೆ. ಸದರಿ ದಾವಾ 3 ನೇ ಐಟಂ ಸ್ವತ್ತನ್ನು 1 ನೇ ಪ್ರತಿವಾದಿ ಪತ್ರ ಬರಹಗಾರರ ಸಮಕ್ಷಮ 5 ನೇ ಪ್ರತಿವಾದಿಯ ಗಂಡನಾದ ಚಂದ್ರಶೇಖರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಅದು ನಮ್ಮ ಗಮನಕ್ಕೆ ಬಂದಿಲ್ಲ.

ದಾವಾ 1 ನೇ ಐಟಂ ಸ್ವತ್ತು ಸಹ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದೆ ಎಂದರೆ ಸರಿಯಲ್ಲ. ಅದು ಪಿತ್ರಾರ್ಜಿತ ಸ್ವತ್ತಾಗಿದೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿದ್ದೇನೆ. ದಾವಾ 1 ನೇ ಐಟಂ ಸ್ವತ್ತನ್ನು ಪ್ರತಿವಾದಿ 1 ರಿಂದ 4 ರವರು 5 ನೇ ಪ್ರತಿವಾದಿಯ ಗಂಡನಿಗೆ ದಿಃ 20.06.2011 ರಂದು ಕ್ರಯದ ಕರಾರು ಪತ್ರ ಮಾಡಿ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಅದು ನನ್ನ ಗಮನಕ್ಕೆ ಬಂದಿಲ್ಲ. ದಾವಾ 2 ನೇ ಐಟಂ ಸ್ವತ್ತು ಸರ್ವೆ ನಂ. 140/2 ಲೇಟ್ ಚಂದ್ರಶೇಖರ್ ರವರ ಹೆಸರಿಗೆ ಖಾತೆಯಾಗಿ ಅವರ ಪೌತಿ ನಂತರ 5 ರಿಂದ 7 ನೇ ಪ್ರತಿವಾದಿಗಳ ಹೆಸರಿಗೆ ಪೌತಿ ಖಾತೆ ಆಗಿದ್ದು, ಅವುಗಳೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ದಾಖಲೆ ಅವರ ಹೆಸರಿಗೆ ಇದ್ದರೂ ಕೂಡ ಸ್ವಾಧೀನ ನಮ್ಮಲ್ಲೆ ಇದೆ ಎನ್ನುತ್ತಾರೆ. ದಾವಾ 1 ನೇ ಐಟಂ ಸ್ವತ್ತನ್ನು ಕರಾರು ಪತ್ರದ ಮೂಲಕ ಹಾಗೂ ದಾವಾ 2 ರಿಂದ 4 ನೇ ಐಟಂ ಸ್ವತ್ತು ಶುದ್ಧ ನೊಂದಾಯಿತ ಕ್ರಯ ಪತ್ರದ ಮೂಲಕ 5 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಆಗಿದ್ದರೂ ಕೂಡ ನಾನು ಪ್ರತಿವಾದಿ 1 ರಿಂದ 4 ರವರೊಂದಿಗೆ ಷಾಮಿಲಾಗಿ ಹಣವನ್ನು ಲಪಟಾಯಿಸುವ ಸಲುವಾಗಿ ಮೋಸ ಮಾಡುವ ದೃಷ್ಟಿಯಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 5 ರವರ ಗಂಡ ಮತ್ತು ಮಕ್ಕಳು ಹಾಗೂ ಪ್ರತಿವಾದಿ 1 ರಿಂದ 4 ರವರ ನಡುವೆ ಆಗಿರುವ ಕ್ರಯ ಪತ್ರಗಳ ವಿಚಾರ ನನಗೂ ಕೂಡ ಚೆನ್ನಾಗಿ ತಿಳಿದಿದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.